ಈ) ಜಿಲ್ಲಾವಾರು ನಿಗದಿಪಡಿಸಿದ ಭೌತಿಕ ಗುರಿಯನ್ನು ಸಾಧಿಸಿದ ಹಾಗೂ ಸಾಧಿಸದ ಜಿಲ್ಲೆಗಳ ವಿವರಗಳು.

ಸಾಧಿಸಿದ ಜಿಲ್ಲೆಗಳು		ಸಾಧಿಸದ ಜಿಲ್ಲೆಗಳು	
೧	ಬೆಂಗಳೂರು	೧	ಶಿವಮೊಗ್ಗ
೨	ಬೆಂಗಳೂರು (ಗ್ರಾಮಾಂತರ)	೨	ತುಮಕೂರು
೩	ಚಿತ್ರದುರ್ಗ	೩	ಮೈಸೂರು
೪	ಕೋಲಾರ	೪	ಕೊಡಗು
೫	ಮಂಡ್ಯ	೫	ಬೆಳಗಾಂ
೬	ಚಿಕ್ಕಮಗಳೂರು	೬	ಬಿಜಾಪುರ
೭	ಹಾಸನ	೭	ಧಾರವಾಡ
೮	ದಕ್ಷಿಣ ಕನ್ನಡ	೮	ಗುಲಬರ್ಗಾ
೯	ಉತ್ತರ ಕನ್ನಡ	೯	ರಾಯಚೂರು
೧೦	ಬಳ್ಳಾರಿ		
೧೧	ಬೀದರ್		

ಶ್ರೀ ಜೆ. ರಾಮದಾಸ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಅಪ್ಪಣೆ ಕೊಡಿಸಿದಹಾಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಕೊಟ್ಟಿರುವ ಸಬ್ಸಿಡಿ ಹಣ ೨೦.೩೧ ಲಕ್ಷ ರೂಪಾಯಿಗಳು ನಮ್ಮ ಹೊಸದುರ್ಗ ಕ್ಷೇತ್ರದಲ್ಲಿ ಹರಿಜನರಿಗೆ, ಲಂಬಾಣಿ ಜನರಿಗೆ ಇವತ್ತಿನವರೆಗೆ ಕೊಟ್ಟಿರತಕ್ಕಂಥ ಸಬ್ಸಿಡಿ ಹಣ ಎಷ್ಟು ಎಷ್ಟು ಜನಕ್ಕೆ ಇದನ್ನು ಕೊಡಲಾಗಿದೆ. ಎರಡನೆಯದಾಗಿ ಕೊಟ್ಟಿರತಕ್ಕಂಥ ಸಬ್ಸಿಡಿ ಹಣವನ್ನು ಸರಿಯಾಗಿ ಸಮರ್ಪಕವಾಗಿ ಹಂಚಿಲ್ಲ, ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಸವಣ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ೧೯೮೭–೮೮ನೇ ಸಾಲಿನಲ್ಲಿ ೧೨೩೨ ಜನ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ. ಇದಕ್ಕೆ ತಲುಗಲಿದ ವೆಚ್ಚ, ಸೀಡ್ ಮನಿ ೨೦ ಲಕ್ಷ, ಸಹಾಯಧನ ೨೦ ಲಕ್ಷ, ಬ್ಯಾಂಕ್ ಸಾಲ ೪೦ ಲಕ್ಷ ರೂಪಾಯಿಗಳು ಈ ಸಹಾಯವನ್ನು ಕೊಡುವಾಗ ಪರಿಶಿಷ್ಟ ಜಾತಿಯಲ್ಲಿ. ಬೋವಿಗಳಿಗೆ ಇಷ್ಟು, ಲಂಬಾಣಿಗಳಿಗೆ ಇಷ್ಟು, ಇತರರಿಗೆ ಇಷ್ಟು ಎಂದು ಬ್ರೇಕ್ ಅಪ್ ಮಾಡುವುದಿಲ್ಲ ಪರಿಶಿಷ್ಟ ಜಾತಿಯವರೆಲ್ಲಾ ಒಂದೇ ಎಂದು ತಿಳಿದು ಕೊಂಡು ನಾವು ಕೊಡುತ್ತಿದ್ದೇವೆ.

ಶ್ರೀ ಜೆ. ರಾಮದಾಸ್,—ಜಿಲ್ಲಾವಾರು ನಿಗದಿಪಡಿಸಿದ ಗುರಿಯನ್ನು ಸಾಧಿಸಿದ ಜಿಲ್ಲೆಗಳು ಹಾಗೂ ಸಾಧಿಸದೇ ಇರುವ ಜಿಲ್ಲೆಗಳ ಪಟ್ಟಿಯನ್ನು ಸಚಿವರು ಕೊಟ್ಟಿದ್ದಾರೆ. ಸಾಧಿಸದೇ ಇರತಕ್ಕಂಥ ಜಿಲ್ಲೆಗಳಲ್ಲಿ ಲ್ಯಾಪ್ಸ್ ಮಾಡಿದಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಸವಣ್ಣಪ್ಪ — ಸಾಧಿಸದೇ ಇರುವ ಜಿಲ್ಲೆಗಳಲ್ಲಿ ಆಗಿರುವ ಪ್ರಗತಿಯನ್ನು ನಾನು ರಿವ್ಯೂ ಮಾಡಿರುತ್ತೇನೆ ಅಲ್ಲಿ ೮೬ ಪರ್ಸೆಂಟ್ ಪ್ರಗತಿಯಾಗಿದೆ. ೧೪ ಪರ್ಸೆಂಟ್ ಕೊರತೆಯಾಗಿದೆ. ಇದನ್ನು ಸಾಧಿಸಿಲ್ಲ ಎಂದು ಹೇಳುವ ಹಾಗೆ ಇಲ್ಲ. They are nearer to the target. ಸ್ವಲ್ಪ ಕಡಿಮೆಯಾಗಿದೆ. ಇದರ ಬಗ್ಗೆಯೂ ಕ್ರಮ ತೆಗೆದುಕೊಳ್ಳುತ್ತೇನೆ.

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕ್ ಮಂಜಗಳಲೆ ಗ್ರಾಮದ ಸರ್ವೆ ನಂ. ೩೧೩ರಲ್ಲಿ ಪರಿಶಿಷ್ಟ ವರ್ಗದವರಿಗೆ ಜಮೀನು ಮಂಜೂರಾತಿ ಬಗ್ಗೆ

೧೯೮೯. ಬಿ. ಸ್ವಾಮಿರಾವ್ (ಹೊಸನಗರ) —ಮಾನ್ಯ ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕ್ ಮಂಜಗಳಲೆ ಗ್ರಾಮದ ಸರ್ವೆ ನಂ. ೩೧೩ರಲ್ಲಿ ೪ ಎಕರೆ ೩೪ ಗುಂಟೆ ಜಮೀನು ಪರಿಶಿಷ್ಟ ವರ್ಗದವರಿಗೆ ಮಂಜೂರಾಗಿರುವುದು ನಿಜವೆ,

ಆ) ರಾಜಕೀಯ ಪ್ರಭಾವದಿಂದ ಅನುಕೂಲಸ್ಥರಿಗೆ ಮಂಜೂರು ಮಾಡುವ ವ್ಯವಸ್ಥೆ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಇ) ಹಾಗಿದ್ದಲ್ಲಿ ಸದರಿ ಜಮೀನನ್ನು ಪರಿಶಿಷ್ಟ ವರ್ಗದವರಿಗೆ ನೀಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು).

ಅ) ಹೊಸನಗರ ತಾಲ್ಲೂಕು ಮಂಜಗಳಲೆ ಗ್ರಾಮದ ಸರ್ವೆ ನಂ. ೩೧೩ರಲ್ಲಿ ೪ ಎಕರೆ ೩೪ ಗುಂಟೆ ಜಮೀನನ್ನು ಹೆಸಲರ ಗಣಪತಿ ಬಿನ್ ರಾಮಪ್ಪ ಇವರಿಗೆ ಮಂಜೂರು ಮಾಡಿದ್ದು ನಂತರ ಸದರೀ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು ಕೆಲವರು ಅನಧಿಕೃತವಾಗಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವುದರಿಂದ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ.

ಆ) ಸದರೀ ಜಮೀನನ್ನು ಶ್ರೀಮಂತ ಜನರಿಗೆ ರಾಜಕೀಯ ಒತ್ತಡದ ಮೇಲೆ ಮಂಜೂರು ಮಾಡುವ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ಪ್ರಶ್ನೆ (ಆ)ಗೆ ಕೊಟ್ಟಿರುವ ಉತ್ತರಗಳಿಂದ ಮುಂದಿನ ಕ್ರಮ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ಶ್ರೀ ಆರ್. ಎನ್. ನಾಯಕ್ (ಶ್ರೀ ಬಿ. ಸ್ವಾಮಿರಾವ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಹೆಸಲರ ಗಣಪತಿ ಬಿನ್ ರಾಮಪ್ಪ ಇವರು ಪರಿಶಿಷ್ಟ ಜಾತಿಗೆ ಸೇರಿದವರೇ ಹೇಗೆ ? ಮತ್ತು ಇಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಕಟ್ಟಿಕೊಂಡಿರುವವರು ಪರಿಶಿಷ್ಟ ಜಾತಿಗೆ ಸೇರಿದವರೇ ಅಥವಾ ಮೇಲ್ವರ್ಗದ ಜಾತಿಗೆ ಸೇರಿದವರೇ ? ನಂತರ ಪರಿಶಿಷ್ಟ ಜಾತಿಯವರಿಗೆ ಜಮೀನು ಮಂಜೂರು ಮಾಡಿದ ಮೇಲೆ ಮೇಲ್ವರ್ಗದ ಜಾತಿಯವರು ಅಂತಹ ಸ್ಥಳದಲ್ಲಿ ಅನಧಿಕೃತ ಕಟ್ಟಡಗಳನ್ನು ಕಟ್ಟಿಕೊಂಡಿದ್ದರೆ ಇದಕ್ಕೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ? ರಾಜ್ಯದಲ್ಲೆಲ್ಲಾ ಪರಿಶಿಷ್ಟ ವರ್ಗದ ಜನರಿಗೆ ಕೊಟ್ಟ ಜಮೀನನ್ನು ಕ್ಯಾನ್ಸಲ್ ಮಾಡಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಲಕ್ಷಾಂತರ ಎಕರೆ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಕೊಟ್ಟಿದ್ದೇವೆ. ಜಮೀನನ್ನು ಇವರಿಗೆ ಗ್ರಾಂಟ್ ಮಾಡುವಾಗ ಅನಧಿಕೃತ ಕಟ್ಟಡಗಳು ಆಗಿದ್ದರೆ ಅಂತಹವರನ್ನು ಅಲ್ಲಿಂದ ಎಬ್ಬಿಸುವುದೂ ಸಹ ಕಷ್ಟ ಇದೆ. ಸಾಮಾನ್ಯವಾಗಿ ಅನಧಿಕೃತ ಕಟ್ಟಡಗಳನ್ನು ಕಟ್ಟಿಕೊಂಡಿರುವವರು ಸೈಟ್‌ಲೆಸ್ ಪೀಪಲ್ಸ್ ಒಂದು ವೇಳೆ ಅನಧಿಕೃತ ಕಟ್ಟಗಳು ಕಟ್ಟಿಕೊಂಡಿದ್ದವರು ಬಡವರಿದ್ದು, ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರೆ ಅವರಿಗೆ ಕಾನೂನು ಬಂದ ಮೇಲೆ ಕಾನೂನು ಪ್ರಕಾರ ರೆಗ್ಯುಲರೈಸ್ ಮಾಡಬೇಕಾಗುತ್ತದೆ, ಉಳಿದಂತಹವರಿಗೆ ಬೇರೆ ಕಡೆ ಜಮೀನು ಇದ್ದರೆ ಕೊಡಬೇಕಾಗುತ್ತದೆ. ಇಲ್ಲಿ ಶ್ರೀಮಂತರಿಗೆ ಕೊಡತಕ್ಕಂಥ ಪ್ರಶ್ನೆ ಇಲ್ಲ.

ಶ್ರೀ ಆರ್. ಎನ್, ನಾಯಕ್.—ಮಾನ್ಯ ಅಧ್ಯಕ್ಷರೇ ಸರಿಯಾಗಿ ಉತ್ತರ ಬರಲಿಲ್ಲ. ಹೆಸಲರ ಗಣಪತಿ ಬಿನ್ ರಾಮಪ್ಪ ಪರಿಶಿಷ್ಟ ಜಾತಿಗೆ ಸೇರಿದವನೇ ? ತಾವೀಗ ಸೈಟ್‌ಲೆಸ್ ಪೀಪಲ್ಸ್ ಅಲ್ಲಿರುವುದು ಎಂದೂ ಹೇಳಿದಿರಿ ಅನಧಿಕೃತವಾಗಿ ಅತಿಕ್ರಮಣ ಮಾಡಿರುವಂತಹ ಜನ ಸೈಟ್‌ಲೆಸ್ ಪೀಪಲ್ಸ್ ಪರಿಶಿಷ್ಟ ಜಾತಿಗೆ ಸೇರಿದವರೇ ಹೇಗೆ ಅಥವಾ ಮೇಲ್ವರ್ಗಕ್ಕೆ ಸೇರಿದವರೇ ? ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆ ಸೈಟ್‌ಲೆಸ್ ಪೀಪಲ್ಸ್ ಬಂದು ಪರಿಶಿಷ್ಟ ಜಾತಿಯವರಿಗೆ ಗ್ರಾಂಟ್ ಮಾಡಿರುವ ಜಾಗದಲ್ಲಿ ಮನೆ ಕಟ್ಟಿಕೊಂಡರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಯಾವ ಜಾತಿಗೆ ಸೇರಿದವರೆಂದು ಅಲ್ಲ. ಅಲ್ಲಿರತಕ್ಕ ಜನ ಸೈಟ್‌ಲೆಸ್ ಬಡ ಜನರಿದ್ದಾರೆ. ಅವರು ಹರಿಜನ ಮತ್ತು ಗಿರಿಜನರೆನ್ನುವ ಮಾಹಿತಿ ಈಗ ನನ್ನಲ್ಲಿ ಇಲ್ಲ. ಅವರು ಪರಿಶಿಷ್ಟ ಜಾತಿವರೆಂದು ರಿಕಾರ್ಡ್‌ನಲ್ಲಿಯೂ ಸಹ ಇಲ್ಲ ಅವರು ಯಾರೇ ಇರಲಿ ಜಮೀನು ಗ್ರಾಂಟ್ ಮಾಡಿದ್ದೇವೆ, ಪೊಜಿಷನ್ ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಅನೇಕ

ಸಲ ನಾವು ಭೂಮಿಯನ್ನು ಗ್ರಾಂಟ್ ಮಾಡಿದಂತಹ ಸಂದರ್ಭದಲ್ಲಿ ಅನ್‌ಆಥರೈಜ್ಡ್ ಆಕ್ಯುಪೇಶನ್ ಆಗಿರುವುದು ಇದೆ. ಆ ಬಗ್ಗೆಯೂ ನಾವು ವಿಚಾರ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ನಾವು ಒಂದು ಕಾನೂನನ್ನು ಸಹ ತರುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಂಡಂತೆ ಆಗಬಾರದು. ಯಾರು ಬಡವರಿಗೆ ತೊಂದರೆ ಕೊಡುತ್ತಾರೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಿಜವಾದ ಬಡವರಿದ್ದರೆ ಅವರಿಗೂ ಜಮೀನು ಕೊಡಿ. ಆದರೆ ಕೊಟ್ಟು ಕಿತ್ತುಕೊಳ್ಳುತಕ್ಕಂಥ ವ್ಯವಸ್ಥೆಯಾಗಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ಸಲ ಅನ್ ಆಥರೈಜ್ಡ್ ಆಕ್ಯುಪೇಶನ್ಸ್ ಆಗಿರುವುದು ಇದೆ. ಗ್ರಾಂಟ್ ಆಗಿರುವಂಥ ಜಮೀನುಗಳೇ ಹೋಗಿವೆ. ಈ ವಿಚಾರದಲ್ಲಿ ನನಗೆ ದೊರೆತ ಮಾಹಿತಿ ಪ್ರಕಾರ ಗ್ರಾಂಟ್ ಆಗಿರುವಂಥದ್ದರಲ್ಲಿ ಅನ್ ಆಥರೈಜ್ಡ್ ಆಕ್ಯುಪೇಶನ್ ಆಗಿದೆ. ಅಲ್ಲಿ ಅವರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಮಂತ್ರಿ ಅವರಿಗೆ ಬೇರೆ ಕಡೆ ಜಮೀನು ಕೊಡಿಸುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಈಗ ಸೈಟ್ ಲೆಸ್‌ಪೀಪಲ್ಸ್ ಒಂದು ಗುಡಿಸಲು ಕಟ್ಟಲು ೩-೫ ಗುಂಟೆ ಜಮೀನು ಮಾತ್ರ ಕೊಡುತ್ತೀರಿ, ಇಲ್ಲಿರುವುದು ಒಟ್ಟು ೪-೫ ಗುಂಟೆ ಜಮೀನು. ಅಲ್ಲಿ ಸುಮಾರು ಒಂದು ಹತ್ತು ಮನೆ ಕಟ್ಟಿದ್ದಾರೆ. ಈ ಹತ್ತು ಮನೆಗಳಿಗೆ ಒಂದು ಎಕರೆ ಜಮೀನು ಆದರೆ ಸಾಕು. ಇನ್ನುಳಿದ ಮೂರು ಮನೆಕ್ಕಾಲು ಎಕರೆ ಜಮೀನನ್ನು ಕ್ಯಾನ್ಸಲ್ ಮಾಡಿದ್ದೀರಿ. ಆತ ಪರಿಶಿಷ್ಟ ಜಾತಿಯವನು ಇದ್ದಾನೆ. ಯಾರು ಮೇಲ್ವರ್ಗದ ಜನ ಇರುತ್ತಾರೋ ಅವರು ಇದನ್ನು ಅತಿಕ್ರಮಿಸಿಕೊಂಡರೆ ಹೇಗೆ ? ರಾಜ್ಯದಲ್ಲೆಲ್ಲಾ ಇದೇ ರೀತಿ ನಡೆಯುತ್ತಿದೆ. ಹರಿಜನ ಮತ್ತು ಗಿರಿಜನರಿಗೆ ಮಂಜೂರಾದ ಜಮೀನನ್ನು ಮೇಲ್ವರ್ಗದ ಜಾತಿಯವರಿಗೆ ಹೊದರೆ ಹೇಗೆ ? ಒಮ್ಮೆ ತಾವು ವಿಧಾನ ಸಭೆಯಲ್ಲಿ ಏನಾದರೂ ಹೇಳಿದರೆ ಅದು ಎಲ್ಲರಿಗೂ ಅನ್ವಯವಾಗುತ್ತದೆ. ಯಾರಾದರೂ ಬಂದು ಎಸ್.ಸಿ., ಎಸ್.ಟಿ.ಯವರಿಗೆ ಸರ್ಕಾರದವರು ಕೊಟ್ಟಿರುವ ಜಾಗದಲ್ಲಿ ಅನಧಿಕೃತವಾಗಿ ಸೇರಿಕೊಂಡರೆ ಅಂಥವರುಗಳನ್ನು ಒಕ್ಕಲೆಬ್ಬಿಸಬೇಕು, ಇಲ್ಲದಿದ್ದರೆ ಎಸ್.ಸಿ., ಎಸ್.ಟಿ.ಯವರಿಗೆ ರಕ್ಷಣೆ ಇಲ್ಲದಂತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪೆಶ್ಕುಲ್ ಕ್ಯಾಸ್ಟ್‌ನವರಿಗಾಗಲೀ ಅಥವಾ ಇನ್ನಾರಿಗೇ ಆಗಲೀ ಸರ್ಕಾರದವರು ನಿವೇಶನ ಅಥವಾ ಜಮೀನುಗಳನ್ನು ಕೊಟ್ಟಮೇಲೆ ಅನಧಿಕೃತವಾಗಿ ಯಾರಾದರೂ ಬಂದು ಅಂಥ ಜಮೀನುಗಳನ್ನು ಆಕ್ರಮಿಸಿಕೊಂಡರೆ ಅವರುಗಳನ್ನು ಬಿಡಿಸುವ ಬಗ್ಗೆ ಒಂದು ಮಸೂದೆಯನ್ನೇ ತರಬೇಕೆಂದು ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಕೇಳುತ್ತಿರುವುದರಲ್ಲಿ ಅರ್ಥ ಇದೆ. ಅಲ್ಲಿ ನಾಲ್ಕೂವರೆ ಎಕರೆಯಂಥ್ಲು ಜಮೀನನ್ನು ಅತಿಕ್ರಮವಾಗಿ ಆಕ್ರಮಿಸಿಕೊಂಡಿರುವವರು ಎಷ್ಟು ಜನ ? ಸೈಟ್‌ಲೆಸ್ ಪೀಪಲ್ಸ್‌ಗಳಿಗೆ ಅಷ್ಟೂ ಜಮೀನು ಏಕೆ ಬೇಕು ? ಒಂದು ಎಕರೆಯಲ್ಲಿ ಸುಮಾರು ೧೮ ರಿಂದ ೨೦ ಸೈಟುಗಳು ಆಗುತ್ತವೆ. ಈ ಜಾಗದಲ್ಲಿ ಎಷ್ಟು ಜನ ಸೈಟ್‌ಲೆಸ್ ಜನರು ಇದ್ದಾರೆಂದು ತಿಳಿದುಕೊಳ್ಳುವುದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ರವರು ಎನ್‌ಕ್ವೈರಿ ಮಾಡಲಿ. If it is true then you take further action.

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಪ್ಯುಟಿ ಕಮಿಷನರ್‌ರವರಿಂದ ರಿಪೋರ್ಟ್ ತರಿಸುತ್ತೇನೆ. ಈ ಜಮೀನನ್ನು ಅಲಾಟ್ ಮಾಡಿದ ಮೇಲೆ ಇವರು ಅತಿಕ್ರಮಣ ಮಾಡಿದ್ದಾರೋ ಎಂಬ ಬಗ್ಗೆ ನಾನು ತಿಳಿದುಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆಯವರು, ಕೇಳಿ.